ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE 13/10/2

# ಮೂರು ಸಚಿವರ ಖಾತೆ ಬದಲು

## ಆರೋಗ್ಯ ಖಾತೆ ಸುಧಾಕರ್‌ಗೆ | ಶ್ರೀರಾಮುಲುಗೆ ಸಮಾಜ ಕಲ್ಯಾಣ ಖಾತೆ

## ಸುಧಾಕರ್‌ಗೆ 1 ಖಾತೆ ಪ್ಲಸ್ | ರಾಮುಲು, ಕಾರಜೋಳಗೆ ತಲಾ 1 ಮೈನಸ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೊರೋನಾ ಸೋಂಕಿನ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವ ಉದ್ದೇಶದಿಂದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಚಿವ ಸಂಪುಟ ವಿಸ್ತರಣೆ ಅಥವಾ ಪುನಾರಚನೆಗೆ ಮೊದಲೇ ಸಣ್ಣ ಸರ್ಜರಿ ಕೈಗೊಂಡು ಖಾತೆ ಮರು ಹಂಚಿಕೆ ಮಾಡಿದ್ದು, ಈ ಸಂಬಂಧ ಸೋಮವಾರ ಅಧಿಕೃತ ಆದೇಶ ಹೊರಬಿದ್ದಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಖಾತೆಗಳ ನಡುವಿನ ಗೊಂದಲದ ಹಿನ್ನೆಲೆಯಲ್ಲಿ ಎರಡೂ ಖಾತೆಗಳನ್ನು ಸಚಿವ ಡಾ.ಕೆ. ಸುಧಾಕರ್ ಅವರಿಗೆ ನೀಡಲಾಗಿದೆ. ↘ 10

### ಯಾರಿಗೆ ಯಾವ ಖಾತೆ?



**ಗೋವಿಂದ ಕಾರಜೋಳ**

■ **ಹಿಂದೆ:** ಪಿಡಬ್ಲ್ಯುಡಿ, ಸಮಾಜ ಕಲ್ಯಾಣ

■ **ಈಗ:** ಪಿಡಬ್ಲ್ಯುಡಿ



**ಬಿ.ಶ್ರೀರಾಮುಲು**

■ **ಹಿಂದೆ:** ಆರೋಗ್ಯ, ಹಿಂದುಳಿದ ವರ್ಗ

■ **ಈಗ:** ಸಮಾಜ ಕಲ್ಯಾಣ



**ಡಾ।ಕೆ.ಸುಧಾಕರ್**

■ **ಹಿಂದೆ:** ವೈದ್ಯ ಶಿಕ್ಷಣ

■ **ಈಗ:** ಆರೋಗ್ಯ, ವೈದ್ಯಕೀಯ ಶಿಕ್ಷಣ

## ಖಾತೆ ಖೋತಾ: ರಾಮುಲು ಬೇಸರ

ತಮ್ಮ ಬಳಿಯಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗ ಖಾತೆ ಹಿಂಪಡೆದು ಸಮಾಜ ಕಲ್ಯಾಣ ಖಾತೆ ಮಾತ್ರ ನೀಡಿದ ಬಗ್ಗೆ ಶ್ರೀರಾಮುಲು ಬೇಸರ ವ್ಯಕ್ತಪಡಿಸಿದ್ದು, ನೇರವಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಅಸಮಾಧಾನ ತೋಡಿಕೊಂಡಿದ್ದಾರೆ. ತಮ್ಮಿಂದ ಒಂದು ಖಾತೆ ಹಿಂಪಡೆದ ಬಗ್ಗೆ ಕಾರಜೋಳ ಯಾವುದೇ ಬೇಸರ ತೋರ್ಪಡಿಸದಿದ್ದರೂ, ಇಬ್ಬರಿಗೂ ಮತ್ತೊಂದು ಖಾತೆ ನೀಡುವ ಸಾಧ್ಯತೆ ಇದೆ ಎಂದು ಉನ್ನತ ಮೂಲಗಳು ತಿಳಿಸಿವೆ. ವಿವರ ↘ 5

# ಮೂರು ಸಚಿವರ ಖಾತೆ ಬದಲು

↙ ಮೊದಲ ಪುಟದಿಂದ

ಇದುವರೆಗೆ ಸುಧಾಕರ್ ಅವರಿಗೆ ವೈದ್ಯಕೀಯ ಶಿಕ್ಷಣ ಖಾತೆ ಹೊಣೆ ಮಾತ್ರ ನೀಡಲಾಗಿತ್ತು. ಇದೀಗ ಅದರೊಂದಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ಜವಾಬ್ದಾರಿಯನ್ನೂ ವಹಿಸುವ ಮೂಲಕ ಉಭಯ ಇಲಾಖೆಗಳ ನಡುವಿನ ಸಮನ್ವಯದ ಕೊರತೆ ನಿವಾರಿಸಲು ಮುಖ್ಯಮಂತ್ರಿಗಳು ಮುಂದಾಗಿದ್ದಾರೆ.

ಖುದ್ದು ವೈದ್ಯರಾಗಿರುವ ಸುಧಾಕರ್ ಅವರು ಎರಡೂ ಇಲಾಖೆಗಳ ಮೂಲಕ ರಾಜ್ಯದಲ್ಲಿ ದಿನೇದಿನೇ ಹೆಚ್ಚುತ್ತಿರುವ ಕೊರೋನಾ ಸೋಂಕು ನಿಯಂತ್ರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಇನ್ನು ಮುಂದೆ ಹೆಚ್ಚಿನ ಅಡೆತಡೆ ಎದುರಾಗಲಿಕ್ಕಿಲ್ಲ ಎಂದು ನಿರೀಕ್ಷಿಸಲಾಗಿದೆ.

ಇನ್ನು ಇದುವರೆಗೆ ಆರೋಗ್ಯ ಖಾತೆ ಹೊಂದಿದ್ದ ಶ್ರೀರಾಮುಲು ಅವರಿಗೆ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರ ಬಳಿ ಹೆಚ್ಚುವರಿಯಾಗಿದ್ದ ಖಾತೆ ಸಮಾಜ ಕಲ್ಯಾಣ ಖಾತೆಯನ್ನು ವಹಿಸಲಾಗಿದೆ. ಕಾರಜೋಳ ಅವರ ಬಳಿ ಲೋಕೋಪಯೋಗಿ ಖಾತೆ ಉಳಿದಿದೆ.

ಆದರೆ, ಶ್ರೀರಾಮುಲು ಬಳಿಯಿದ್ದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯನ್ನೂ ವಾಪಸ್ ಪಡೆದ ಮುಖ್ಯಮಂತ್ರಿಗಳು ಅದನ್ನು ತಮ್ಮ ಬಳಿಯೇ ಇರಿಸಿಕೊಂಡಿದ್ದಾರೆ. ಅಲ್ಲಿಗೆ ಇದುವರೆಗೆ ಎರಡೆರಡು ಖಾತೆಗಳನ್ನು ಹೊಂದಿದ್ದ ಗೋವಿಂದ ಕಾರಜೋಳ ಮತ್ತು ಶ್ರೀರಾಮುಲು ಅವರಿಗೆ ಇದೀಗ ಕೇವಲ ಒಂದೊಂದು ಖಾತೆ ಜವಾಬ್ದಾರಿ ನೀಡಿದ್ದರೆ, ಮೊದಲ ಬಾರಿಗೆ ಸಚಿವರಾಗಿರುವ ಸುಧಾಕರ್ ಅವರಿಗೆ ಎರಡು ಖಾತೆಗಳ ಹೊಣೆ ವಹಿಸಲಾಗಿದೆ.

**ಕೋವಿಡ್ ನಿರ್ವಹಣೆ ಕಾರಣ:** ಕೋವಿಡ್-19 ನಿರ್ವಹಣೆ ಕುರಿತಂತೆ ಕೆಲವು ತಿಂಗಳುಗಳ ಹಿಂದೆಯೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗಳ ನಡುವೆ ಹೊಂದಾಣಿಕೆ ಕೊರತೆ ಏರ್ಪಟ್ಟು ಸಾಕಷ್ಟು ಸಮಸ್ಯೆ ಸೃಷ್ಟಿಯಾಗಿತ್ತು. ಎರಡೂ ಇಲಾಖೆಗಳ ನಡುವೆ ಸಮನ್ವಯತೆ ಅತ್ಯಗತ್ಯವಾಗಿದ್ದರೂ ಬೇರೆ ಬೇರೆ ಸಚಿವರ ಬಳಿ ಖಾತೆ ಇದ್ದುದರಿಂದ ಸಮನ್ವಯ ಕಷ್ಟವಾಗಿತ್ತು. ಈ ಬಗ್ಗೆ ಸಾರ್ವಜನಿಕರಿಂದ ಹಾಗೂ ಪ್ರತಿಪಕ್ಷಗಳ ಮುಖಂಡರಿಂದ ಸಾಕಷ್ಟು ಟೀಕೆ ಕೂಡ ಕೇಳಿಬಂದಿತ್ತು.

ಆರಂಭದಲ್ಲೇ ಕೋವಿಡ್ ನಿರ್ವಹಣೆಯಲ್ಲಿ ಗೊಂದಲ ಉಂಟಾಗುತ್ತಿದ್ದಂತೆ ಸುಧಾಕರ್ ಅವರಿಗೆ ರಾಜಧಾನಿ ಬೆಂಗಳೂರಿನ ಕೋವಿಡ್ ಉಸ್ತುವಾರಿ ಮತ್ತು ಶ್ರೀರಾಮುಲು ಅವರಿಗೆ ರಾಜ್ಯದ ಇತರ ಭಾಗಗಳಲ್ಲಿನ ಕೋವಿಡ್ ಉಸ್ತುವಾರಿ ನೀಡಿ ಮುಖ್ಯಮಂತ್ರಿಗಳು ಆದೇಶ ಹೊರಡಿಸಿದ್ದರು.

ಈ ಬದಲಾವಣೆ ಮಾಡಿದರೂ ಇಲಾಖೆಗಳ ಕಾರ್ಯನಿರ್ವಹಣೆಯಲ್ಲಿ ಸಮಸ್ಯೆ ಕಡಮೆಯಾಗಿರಲಿಲ್ಲ, ಮುಸುಕಿನ ತಿಕ್ಕಾಟ ಮುಂದುವರೆದೇ ಇತ್ತು. ಅಂತಿಮವಾಗಿ ಎರಡೂ ಇಲಾಖೆಗಳ ನಡುವಿನ ತಿಕ್ಕಾಟಕ್ಕೆ ಅಂತ್ಯ ಹಾಡುವ ಉದ್ದೇಶದಿಂದ ಸ್ವತಃ ವೈದ್ಯರಾಗಿರುವ ಸುಧಾಕರ್ ಅವರಿಗೇ ಹೆಚ್ಚಿನ ಜವಾಬ್ದಾರಿ ನೀಡುವುದು ಸೂಕ್ತ ಎಂಬ ನಿಲುವಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಬಂದರು ಎನ್ನಲಾಗಿದೆ.